ಅದರಲ್ಲಿ ನಿಗದಿತ ಸಮಯವನ್ನು ಪಾಲಿಸುವುದು ಬಹುಮುಖ್ಯ. ಅದನ್ನು ಸರಿ ಮಾಡಿಕೊಳ್ಳಲು ಹಿಂದಿನ ವರ್ಷದ ಪ್ರಶ್ನೆಪತ್ರಿಕೆಗಳನ್ನು ಅಭ್ಯಾಸ ಮಾಡಬೇಕು. ನೂರಕ್ಕೆ ನೂರು ಪ್ರಶ್ನೆಗಳನ್ನು ಯಾರೂ ಉತ್ತರಿಸುವುದಿಲ್ಲ. ಗರಿಷ್ಠ ಎಷ್ಟು ಉತ್ತರಿಸಲು ಸಾಧ್ಯವೋ ಅಷ್ಟನ್ನು ಮಾಡಬೇಕು. ನಮಗೆ ಇರುವ ಬೇರೆ ವಿಷಯಗಳ ತಿಳಿವಳಿಕೆ, ಕೌಶಲಗಳಿಗೆ ಹೆಚ್ಚು ಮಹತ್ವ ಕೊಡಬೇಕು.

ಸಾಮಾನ್ಯವಾಗಿ ಹೆಚ್ಚಿನ ಸ್ಪರ್ಧಾಳುಗಳು ಓದುವ ಪ್ರಮುಖ ಪುಸ್ತಕಗಳನ್ನೇ ನಾನೂ ಓದಿದೆ. ಇದಕ್ಕಾಗಿ ಪ್ರತ್ಯೇಕ ತರಬೇತಿ ತೆಗೆದುಕೊಳ್ಳಲಿಲ್ಲ. ಹುಬ್ಬಳ್ಳಿಯಲ್ಲಿ ನಮ್ಮ ಮನೆಯಲ್ಲೇ ಕುಳಿತು ಓದಿದೆ. ಮುಖ್ಯಪರೀಕ್ಷೆಗೆ ಪ್ರತಿ ವಿಷಯಕ್ಕೂ ಒಂದೊಂದು ಒಳ್ಳೆಯ ಪುಸ್ತಕವನ್ನು ಆಯ್ಕೆ ಮಾಡಿಕೊಳ್ಳಬೇಕು. ಒಂದು ವಿಷಯಕ್ಕೆ ಅಧಿಕ ಪುಸ್ತಕವನ್ನು ಆಯ್ಕೆ ಮಾಡಿಕೊಳ್ಳುವುದಕ್ಕಿಂತ ಒಂದೇ ಪುಸ್ತಕವನ್ನು ಮತ್ತೆ ಮತ್ತೆ ಓದಿದೆ. ಎರಡು ಭಾಷಾ ಪತ್ರಿಕೆ ಸೇರಿ ಒಟ್ಟು ಒಂಬತ್ತು ಪತ್ರಿಕೆಗಳಿಗೆ ಉತ್ತರಿಸಬೇಕು. ಹಾಗಾಗಿ ಬರೆಯುವ ಅಭ್ಯಾಸ ಬಹಳ ಮುಖ್ಯ. ಹಿಂದಿನ ವರ್ಷದ ಪ್ರಶ್ನೆಪತ್ರಿಕೆ ಬಿಡಿಸುವುದು ಇಲ್ಲೂ ಮುಖ್ಯ. ಪ್ರಶ್ನೆ ಪತ್ರಿಕೆಯ ಮಾದರಿ ತಿಳಿದುಕೊಳ್ಳುವುದು ತುಂಬ ಸಹಕಾರಿ. ಕನಿಷ್ಠ ಐದು ವರ್ಷದ ಪ್ರಶ್ನೆ ಪತ್ರಿಕೆಯನ್ನು ನಿಗದಿತ ಸಮಯದಲ್ಲಿ ಬರೆದು



ಬರೆದು ಅಭ್ಯಾಸ ಮಾಡಬೇಕು. ಅದನ್ನು ಮಾಡಿದ ಮೇಲೆ ನಾನೇ ಮೌಲ್ಯಮಾಪನ ಮಾಡಿದೆ. ಹಿಂದೆ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದವರ ಮಾರ್ಗದರ್ಶನವನ್ನು ತೆಗೆದುಕೊಂಡೆ. ಕೋಚಿಂಗ್ ಸಂಸ್ಥೆಗಳಿಗಿಂತ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದವರ ಜೊತೆ ಮಾತನಾಡುವುದು ಮುಖ್ಯ ಅನ್ನಿಸಿತು. ಯೂಟ್ಯೂಬ್‌ನಲ್ಲಿಯೂ ಅವರ ಸಂದರ್ಶನ, ಭಾಷಣಗಳು ಸಿಗುತ್ತವೆ.

ಮುಖ್ಯಪರೀಕ್ಷೆಗೆ ಐಚ್ಛಿಕ ವಿಷಯವಾಗಿ ಕಾನೂನು ವಿಷಯವನ್ನೇ ಆಯ್ಕೆ ಮಾಡಿಕೊಂಡೆ. ಅದರಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳುವುದು ಅಗತ್ಯವಾದ್ದರಿಂದ ನಮ್ಮ ಆಸಕ್ತಿಯ ವಿಷಯವನ್ನೇ ತೆಗೆದುಕೊಳ್ಳಬೇಕು. ಸಂದರ್ಶನಕ್ಕೆ ಎರಡು ತಿಂಗಳ ಸಮಯ ಸಿಕ್ಕಿತು. ಅದಕ್ಕಾಗಿ ಹಿರಿಯ ಅಧಿಕಾರಿಗಳು, ಹಿಂದಿನ ವರ್ಷ ಸಂದರ್ಶನಕ್ಕೆ ಹಾಜರಾದವರ ಮಾರ್ಗದರ್ಶನ ತೆಗೆದುಕೊಂಡೆ. ಸಂದರ್ಶನ ಎನ್ನುವುದು ಪ್ರಶ್ನೋತ್ತರ ಅವಧಿಯಲ್ಲ. ಅದು ವ್ಯಕ್ತಿತ್ವ ಅಳೆಯುವ ಪ್ರಕ್ರಿಯೆ. ಹಾಗಾಗಿ ನಮ್ಮ ವ್ಯಕ್ತಿತ್ವವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದಾದ ಮೇಲೆ ನಮ್ಮ ಹಿನ್ನೆಲೆ, ನಮ್ಮ ಊರು, ತಾಲ್ಲೂಕು, ಜಿಲ್ಲೆ, ಓದಿದ ವಿಷಯಗಳ ಬಗ್ಗೆ ತಿಳಿದುಕೊಳ್ಳಬೇಕು. ಅದೆಲ್ಲವನ್ನು ಆಳವಾಗಿ ಅರ್ಥ ಮಾಡಿಕೊಂಡರೆ ಸಂದರ್ಶನ ಸುಲಭ.

ಹಿರಿಯ ಅಧಿಕಾರಿಗಳಿಂದ ಸಂದರ್ಶನದ ಟೆಸ್ಟ್ ಅನ್ನು ಆನ್‌ಲೈನ್‌ನಲ್ಲಿ ತೆಗೆದುಕೊಂಡಿದ್ದೆ. ಸಂದರ್ಶನಕ್ಕಿಂತ 10 ದಿನ ಮೊದಲು ದೆಹಲಿಗೆ ಹೋಗಿ ಒಂದು ಸಂಸ್ಥೆಯಲ್ಲಿ ಸಂದರ್ಶನ ಟೆಸ್ಟ್ ತೆಗೆದುಕೊಂಡೆ. ಸುಮಾರು ಎಂಟು ಹತ್ತು ಸಂದರ್ಶನ ಪರೀಕ್ಷೆಗಳಿಗೆ ಹಾಜರಾಗಿದ್ದೆ. ಅವರು ನನಗೆ ಕೊಟ್ಟ ಫೀಡ್‌ಬ್ಯಾಕ್ ತುಂಬ ಸಹಾಯ ಮಾಡಿತು.

ಸಂದರ್ಶನ ಹೃದಯಸ್ಪರ್ಶಿಯಾಗಿರುತ್ತದೆ. ಸಂದರ್ಶಕರೂ ಅನುಭವಿ ಹಿರಿಯ ಅಧಿಕಾರಿಗಳೇ ಆಗಿರುತ್ತಾರೆ. ಆತ್ಮೀಯವಾಗಿ ಬರಮಾಡಿಕೊಂಡು ಮಾತನಾಡಿಸುತ್ತಾರೆ. ಅರ್ಜಿ ನೋಡಿದ ತಕ್ಷಣ ನನ್ನ ಬಗ್ಗೆ ಅವರಿಗೆ ಮಾಹಿತಿ ಗೊತ್ತಾಗಿರುತ್ತದೆ. ವೈಯಕ್ತಿಕ ವಿಷಯಗಳಿಂದ ಚರ್ಚೆ ಆರಂಭಿಸುತ್ತಾರೆ. ಕಾನೂನು ವಿದ್ಯಾರ್ಥಿಯಾಗಿದ್ದ ನಾನು ಅಪರಾಧ ನ್ಯಾಯಶಾಸ್ತ್ರದಲ್ಲಿ ಇಂಟರ್ನ್‌ಶಿಪ್ ಮಾಡಿದ್ದೆ. ಅದರ ಮೇಲೇ ಪ್ರಶ್ನೆಗಳನ್ನು ಕೇಳಿದರು. ಹವ್ಯಾಸದ ಬಗ್ಗೆ ಕೇಳಿದರು. ಅದೆಲ್ಲ ನಾನು ನೀಡಿದ ಮಾಹಿತಿಯ ಮೇಲೆ ನಡೆಯುತ್ತದೆ. ನನಗೆ ಪ್ರಾಣಿಗಳ ಬಗ್ಗೆ ಪ್ರೀತಿ ಹೆಚ್ಚು. ಸಿನಿಮಾ ನೋಡುವ ಹವ್ಯಾಸ ಇದೆ. ಅದೆಲ್ಲ ಸಂದರ್ಶನದ ಭಾಗವಾಗಿತ್ತು. ಇದರ ಜೊತೆ ಸಮಾಜ ಕಲ್ಯಾಣ ಮತ್ತು ಕಾನೂನು ವಿಷಯಕ್ಕೆ ಸಂಬಂಧಿಸಿದಂತೆ ಕೇಳಿದರು.

◆ ಮಹಿಳಾ ಸಬಲೀಕರಣದಲ್ಲಿ ನಿಮ್ಮ ಆದ್ಯತೆಗಳು ಏನು?

ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯ ಪ್ರಾತಿನಿಧ್ಯ ಹೆಚ್ಚಾಗುತ್ತಿದೆ. ಅದಕ್ಕೆ ಸೂಕ್ತ ವೇದಿಕೆ ಮತ್ತು ಅಂತಹ ಸ್ಪರ್ಧೆಗೆ ಸಹಕಾರಿ ಆಗುವ ವಾತಾವರಣವನ್ನು ನಿರ್ಮಿಸಿಕೊಡಬೇಕು ಎನ್ನುವುದು ನನ್ನ ಸಂಕಲ್ಪ. ಬಾಲ್ಯದಿಂದಲೂ ಅವರ ಬಗ್ಗೆ ಕಾಳಜಿ ವಹಿಸಬೇಕು. ಮೂಲಭೂತವಾಗಿ ಗುಣಮಟ್ಟದ ಶಿಕ್ಷಣ ನೀಡಬೇಕು. ಅವರಿಗೆ ಆದರ್ಶ ವ್ಯಕ್ತಿತ್ವಗಳನ್ನು ಪರಿಚಯಿಸಬೇಕು. ಬೇರೆ ಬೇರೆ ಕ್ಷೇತ್ರದಲ್ಲಿ ಅಂತಹ ಸಾಧಕ ಮಾದರಿ ವ್ಯಕ್ತಿಗಳು ಸಿಗುತ್ತಾರೆ; ಅವರಿಂದ ಮಾರ್ಗದರ್ಶನ ಕೊಡಿಸಬೇಕು. ಅವರ ಇಷ್ಟವನ್ನು ಅರಿತು ಪ್ರೋತ್ಸಾಹ ನೀಡಬೇಕು. ನಾನು ಯಾವುದೇ ಸೇವಾಕ್ಷೇತ್ರಕ್ಕೆ ಹೋದರೂ ಮಹಿಳಾ ಸಬಲೀಕರಣ ನನ್ನ ಆದ್ಯತೆಯ ಕೆಲಸ ಆಗುತ್ತದೆ. ಗಂಡುಮಕ್ಕಳಿಗೆ ಸರಿಸಮವಾಗಿ ಕೆಲಸ ಮಾಡುವ ಅವಕಾಶ ಮತ್ತು ಸೌಲಭ್ಯವನ್ನು ನೀಡುವ ವಾತಾವರಣವನ್ನು ಮನೆಯಲ್ಲೂ ನೀಡಬೇಕು. ಈ ಬಗ್ಗೆ ಸಾಮಾಜಿಕ ಜಾಗೃತಿಯನ್ನು ನಾವು ಕೊಡುವ ಅಗತ್ಯ ಇದೆ.

ಪ್ರತಿಕ್ರಿಯಿಸಿ: **feedback@sudha.co.in**

